**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅ. ದೇವೆಗೌಡ ರವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಸಾಸಲು ಹೋಬಳಿ ಗುಂಡುಂಗೆರೆ, ಉಜ್ಜಿನಿ, ಹೊಸಹಳ್ಳಿ ಗ್ರಾಮಗಳ ಪೆಟ್ಟಿ ಮಳಿಗೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಆ ಹಳ್ಳಿಗಳಲ್ಲಿ ಸಣ್ಣ ಮಕ್ಕಳಿಂದ ಹಿಡಿದು ವಯಸ್ಸಾದವರು ಸಹ ಕುಡಿದು ಹಾಳಾಗುತ್ತಿರುತ್ತಾರೆ. ಸದರಿ ಪೆಟ್ಟಿಗೆ ಮಳಿಗೆಯವರು ದುಬಾರಿ ದರದಲ್ಲಿ ಮದ್ಯ ಮಾರಾಟ ಮಾಡುತ್ತಿರುವುದನ್ನು ತಪ್ಪಿಸುವ ಬಗ್ಗೆ ಅಬಕಾರಿ ಸಚಿವರ ಗಮನ ಸೆಳೆಯ ಬಯಸಿರುವ ಕುರಿತು.

*******

**ಸರ್ಕಾರದ ಹೇಳಿಕೆ:**

1. ಗ್ರಾಮೀಣ ಭಾಗದಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅಧಿಕೃತ ಸನ್ನದು ಮಳಿಗೆಳಿಂದ ಮದ್ಯವನ್ನು ಖರೀದಿಸಿ, ಅವುಗಳನ್ನು ಸಂಗ್ರಹಿಸಿ ಕಿರಾಣಿ ಅಂಗಡಿ, ಹೋಟೆಲ್, ಬೀಡಾ ಡಬ್ಬಿ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪೆಟ್ಟಿಗೆ ಅಂಗಡಿಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡಲು ಅಬಕಾರಿ ಕಾಯ್ದೆ ಮತ್ತು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

2. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಸಾಸಲು ಹೋಬಳಿಯ ಗುಂಡುಂಗೆರೆ, ಉಜ್ಜಿನಿ, ಹೊಸಹಳ್ಳಿ ಗ್ರಾಮಗಳಲ್ಲಿ ಅನಧಿಕೃತ ಸ್ಥಳದಲ್ಲಿ ಚಿಲ್ಲರೆಯಾಗಿ ಮದ್ಯವನ್ನು ಮಾರಾಟ ಮಾಡುವುದು, ಮದ್ಯ ಸೇವಿಸುವುದು ಹಾಗೂ ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಕರ್ನಾಟಕ ಅಬಕಾರಿ ಕಾಯಿದೆ, 1965 ರಂತೆ ಅನ್ವಯಿಸುವ ಕಲಂಗಳಂತೆ ಮೊಕದ್ದಮೆಗಳನ್ನು ದಾಖಲಿಸಲಾಗಿದೆ ಹಾಗೂ ಕಳೆದ ಮೂರು ವರ್ಷಗಳಲ್ಲಿ 55 ದಾಳಿಗಳನ್ನು ನಡೆಸಿ, 52 ಜನರನ್ನು ದಸ್ತಗಿರಿಗೊಳಪಡಿಸಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ವಿವರವು ಕೆಳಕಂಡಂತಿದೆ:

| ಅಬಕಾರಿ ಸಾಲು (ಜುಲೈನಿಂದ ಜೂನ್ ವರೆಗೆ) | ಕರ್ನಾಟಕ ಅಬಕಾರಿ ಕಾಯಿದೆ ಅನ್ವಯ ದಾಖಲಿಸಿರುವ ಪ್ರಕರಣಗಳು | | ವಸೂಲಾದ ದಂಡದ ಮೊತ್ತ (ರೂಗಳಲ್ಲಿ) |
|---|---|---|---|
| | ಕಲಂ 32 | ಕಲಂ 15(ಎ) | |
| 2018–19 | 1 | 16 | 16,000 |
| 2019–20 | – | 32 | 32,000 |
| 2020–21 (ದಿ:22-09-2020 ಅಂತ್ಯಕ್ಕೆ) | – | 3 | 3,000 |
| **ಒಟ್ಟು** | **1** | **51** | **51,000** |

3. ಇಂತಹ ಪ್ರಕರಣಗಳನ್ನು ತಡೆಗಟ್ಟಲು ಜನಜಾಗೃತಿ ಮೂಡಿಸಿ ಗ್ರಾಮಸಭೆಗಳನ್ನು ನಡೆಸುತ್ತಿದ್ದು, ಗುಂಡುಂಗೆರೆ, ಉಜ್ಜಿನಿ, ಹೊಸಹಳ್ಳಿ ಗ್ರಾಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ 5 ಗ್ರಾಮ ಸಭೆಗಳನ್ನು ನಡೆಸಲಾಗಿದೆ. ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 50 ರಂತೆ ಅಬಕಾರಿ ಅಕ್ರಮಗಳನ್ನು

ತಡೆಗಟ್ಟುವಲ್ಲಿ ಸಾರ್ವಜನಿಕರ ಜವಾಬ್ದಾರಿ / ಹೊಣೆಗಾರಿಕೆ ಬಗ್ಗೆ ಅರಿವು ಮೂಡುವಂತೆ ತಿಳುವಳಿಕೆ ಪತ್ರಗಳನ್ನು ಗ್ರಾಮದ ಜನ ಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಜಾರಿ ಮಾಡಲಾಗುತ್ತಿದೆ. ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಿ ರಸ್ತೆ ಕಾವಲು, ರಾತ್ರಿಗಸ್ತು ಹಾಗೂ ಜಾರಿ ಕಾರ್ಯಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸುತ್ತೋಲೆ/ಪತ್ರ ಮೂಲಕ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಎರಡು ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಗಳಲ್ಲಿಯೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು, ನಿರಂತರ ದಾಳಿ ಕಾರ್ಯ ನಡೆಸಿ, ಯಾವುದೇ ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ.

ಆಇ 80 ಇಎಲ್‌ಕ್ಯೂ 2020

(ಹೆಚ್. ನಾಗೇಶ್)

ಅಬಕಾರಿ ಸಚಿವರು